'RETURN!'

'ರಿಟರ್ನ್?'

'ಹೌದು; ರಿಟರ್ನ್. ಎಂದರೆ ಯುಟರ್ನ್!'

'ಎಲ್ಲಿಗೆ?'

'ನಿನ್ನ ವಿಲೇಜ್‌ಗೆ, ಸಂಸ್ಕೃತಿಗೆ, ಮೂಲಕ್ಕೆ, ಪ್ರೋಟೋಫಾರ್ಮಿಗೆ, ಪ್ರೋಟೋಸ್ಟೇಟಿಗೆ.'

'ಹಾಗಿದ್ದರೆ ನಾನಿನ್ನು ಎಂದೂ ಇಲ್ಲಿಗೆ ಬರುವ ಹಾಗಿಲ್ಲ?'

'ಯಾಕಿಲ್ಲ? ಹಂಡ್ರಡ್ ಟೈಮ್ಸ್ ಬರಬಹುದು; ಆದರೆ, ಮೇನ್‌ಸ್ಟ್ರೀಮ್‌ಗೆ ಸೇರಿಸುವುದು ಬಿಡುವುದು ನಮ್ಮ ಕೈಯಲ್ಲಿಲ್ಲ.'

'ಮತ್ತೆ ಯಾರ ಕೈಯಲ್ಲಿದೆ?'

'ನಿನ್ನದೇ ಕೈಯಲ್ಲಿದೆ. ಈಗ ಹೋಗು, ಜೀವನದಲ್ಲಿ ತೊಡಗಿಕೋ, ತಲ್ಲೀನನಾಗು, ಮುಳುಗು, ಬಿಟ್ಟುಕೊಡು, ಧ್ಯಾನಸ್ಥನಾಗು.'

'ಒಂದು ಸಂದೇಹ, ಮೇಡಂ.'

'ಏನದು?'

'ಒಂದು ವೇಳೆ ನಾನು ಮತ್ತೆ ಧಾವಂತಪಟ್ಟರೆ ನನಗೆ ಗೊತ್ತಾಗುವುದು ಹೇಗೆ?'

'ನಿಜವಾದ ಸಂದೇಹ. ಅದಕ್ಕೊಂದು ಉಪಾಯ ಇದೆ,' ಎಂದು ಮೇಡಂ ಬೆಲ್ ಒತ್ತಿದರು. ಇಬ್ಬರು ಧಾಂಡಿಗರು ಅದೆಲ್ಲಿಂದಲೋ ಪ್ರತ್ಯಕ್ಷರಾದರು. 'ಈತನಿಗೆ ನಂಬರ್ ಟೂ ಫಿಕ್ಸ್ ಮಾಡಿ ಬಿಟ್ಟುಬಿಡಿ!' ಎಂದರು ರುದ್ರಮದೇವಿ. 'ಈಗ ಹೋಗಿ ಬಾ, ಅನೇಕನಾಥ. ಪಕ್ವವಾದಾಗ ನಿನಗೆ ಕರೆ ಬರುತ್ತದೆ. ಆಗ ಬಾ. ಅಲ್ಲೀ ವರೆಗೆ ಕಾದಿರಬೇಕು. ತ್ವರೆ ಬೇಡ, ಆತುರ ಬೇಡ; ನಿರಾಳವಾಗಿರು, ಗೊತ್ತಾಯಿತೇ? ದ ಸೆಶ್ಯನ್ ಈಜ್ ಓವರ್!' ಎಂದು ಅವರು ಹ್ಯಾಮರ್ ಬಡಿದರು. ಅದು ನನ್ನ ತಲೆಗೇ ಬಿದ್ದಂತೆ ಅನಿಸಿ ಮೈ ನಡುಗಿತು. ಫೈನಾಲಿಟಿ ಎಂದರೆ ಇದೇ ಅಲ್ಲವೇ?

**'ಮೂಲಕ ಮಹಾಶಯರು, ರೂಪಕ ಮಹಾಶಯರು ಬೇಕಾದ್ದು ಮಾಡಿಕೊಳ್ಳಲಿ. ಅಲಂಕಾರಪ್ರಿಯರು ಅಲಂಕಾರ ಮಾಡಿಕೊಂಡು ತಿರುಗಲಿ. ವಯಸ್ಸಾದವರು ಬಿಳಿಗೂದಲಿಗೆ ಕಪ್ಪು ಡೈ ಮಾಡಿಕೊಂಡು ಅಸಹ್ಯವಾಗಿ ಕಾಣಿಸಲಿ. ನಾನು ನನ್ನಷ್ಟಕ್ಕೇ ಇರುವೆ; ಅವರನ್ನು ಅನುಸರಿಸುವ ಅಗತ್ಯವಿಲ್ಲ. ಅನುಸರಿಸಿದರೆ ನಾನು ಹತ್ತರಲ್ಲಿ ಹನ್ನೊಂದು ಆಗುತ್ತೇನೆ. ಅದು ಬೇಡ.'**

ಒಡನೆಯೇ ಧಾಂಡಿಗರು ನನ್ನನ್ನು ದೈಹಿಕವಾಗಿ ಎತ್ತಿಕೊಂಡು ಹೋಗಿ ತುಸು ದೂರದಲ್ಲೇ ಇದ್ದ ವರ್ಕ್‌ಶಾಪೊಂದನ್ನು ಹೊಕ್ಕರು. ಅಲ್ಲೊಂದು ಎತ್ತರದ ಸಾಗುವಾನಿ ಮರದ ಬೆಂಚಿನ ಮೇಲೆ ಮಲಗಿಸಿ ಕೈಕಾಲುಗಳಿಗೆ ಸ್ಟ್ರ್ಯಾಪ್ ಬಿಗಿದು ಕಟ್ಟಿದರು. 'ಇದೇನು ಮಾಡುತ್ತಿದ್ದೀರಿ? ಏನಿದೆಲ್ಲ? ಬಿಟ್ಟುಬಿಡಿ ನನ್ನನ್ನು!' ಎಂದೆ ಗಾಬರಿಯಿಂದ. ಅವರು ಮಾತಾಡಲಿಲ್ಲ. ನಾನು ಎಲ್ಲಾ ಕಡೆ ಒಂದು ವಿಚಿತ್ರವನ್ನು ಗಮನಿಸಿದ್ದೇನೆ. ಯಾವನೇ ಟೆಕ್ನಿಶಿಯನ್ ಕೂಡ ಮಾತಾಡುವುದಿಲ್ಲ. ಇವರು ನನ್ನ ಕಾಲುಗಳಿಗೆ ಗಗ್ಗರಗಳಂಥ ಎರಡು ಸಾಧನಗಳನ್ನು ಹಾಕಿ ವೆಲ್ಡ್ ಮಾಡಿದರು. ಇನ್ನು ನಾನವುಗಳನ್ನು ಇಷ್ಟಬಂದಂತೆ ಕಳಚುವುದು ಸಾಧ್ಯವಿರಲಿಲ್ಲ. ಈ ಗಗ್ಗರಗಳಿಂದ ನನಗೆ ನೋವೇನೂ ಅನಿಸಲಿಲ್ಲ, ಆದರೆ, ರಗಳೆಯೆನಿಸಿದ್ದು ನಿಜ. ಕ್ರಮೇಣ ಸರಿಯಾಗುತ್ತದೆ ಎಂದುಕೊಂಡೆ. ಹೆಚ್ಚು ತಡಮಾಡದೆ ಈ ಧಾಂಡಿಗರು ನನ್ನನ್ನು ಅಲ್ಲಿಂದ ಬಿಡುಗಡೆ ಮಾಡಿದರು. ನಾನವರಿಗೆ 'ಥ್ಯಾಂಕ್ಸ್!' ಎಂದೆ; ಅದಕ್ಕೂ ಅವರು ಪ್ರತಿಕ್ರಿಯಿಸಲಿಲ್ಲ.